ವಿಫಲ ಬಾವಿ ಫಲಾನುಭವಿಗಳಿಗೆ ಶೀಘ್ರ ಅನುದಾನ ನೀಡುವುದು

222 (170)**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):–** ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಪಿ.ಎಲ್.ಡಿ. ಬ್ಯಾಂಕಿನಲ್ಲಿರುವ ವಿಫಲ ಬಾವಿ ಅರ್ಜಿಗಳನ್ನು ಜಿಲ್ಲಾಧಿಕಾರಿ ಅನುಮೋದನೆ ನೀಡಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುವ ಅರ್ಜಿಗಳೆಷ್ಟು (ವಿವರ ನೀಡುವುದು);

(ಆ) ಈ ಫಲಾನುಭವಿಗಳಿಗೆ ಇದುವರೆವಿಗೂ ಎಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾಗದೆ ವಿಳಂಬವಾಗಿರುವುದರಿಂದ ರೈತರು ಹೆಚ್ಚುವರಿ ಸಾಲ ಪಡೆದುಕೊಳ್ಳಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದರೆ ಈ ಫಲಾನುಭವಿಗಳಿಗೆ ತಕ್ಷಣ ಅನುದಾನ ಬಿಡುಗಡೆ ಮಾಡಲು ಸರ್ಕಾರ ಎಷ್ಟು ಸಮಯದೊಳಗೆ ಕ್ರಮ ತೆಗೆದುಕೊಳ್ಳುವುದು?

ಶ್ರೀ ಬಿ. ಜೆ. ಪುಟ್ಟಸ್ವಾಮಿ (ಮಾನ್ಯ ಸಹಕಾರ ಸಚಿವರು):–

(ಅ) ಬೀದರ್ ಜಿಲ್ಲೆಯ 05 ಪಿಎಲ್‌ಡಿ ಬ್ಯಾಂಕುಗಳ 2341 ವಿಫಲಬಾವಿ ಅರ್ಜಿಗಳನ್ನು ಬೀದರ್ ಜಿಲ್ಲಾಧಿಕಾರಿಯವರು ಅನುಮೋದನೆ ನೀಡಿ ಪ್ರಸ್ತಾವನೆಯನ್ನು ಸಹಕಾರ ಸಂಘಗಳ ನಿಬಂಧಕರಿಗೆ ಕಳುಹಿಸಿರುತ್ತಾರೆ. ಪಿಕಾರ್ಡ್ ಬ್ಯಾಂಕುವಾರು ವಿವರ ಕೆಳಗಿನಂತಿದೆ.

ಕ್ರ. ಸಂ.	ಬೀದರ್ ಜಿಲ್ಲೆ	ಸಂಖ್ಯೆ	ಅಸಲು	ಬಡ್ಡಿ	ಒಟ್ಟು ಮೊತ್ತ
1.	ಔರಾದ್	760	124.23	95.36	219.59
2.	ಬೀದರ್	135	16.38	29.71	46.09
3.	ಬಾಲ್ಕಿ	259	45.52	29.97	75.49
4.	ಬಸವಕಲ್ಯಾಣ	375	61.27	78.85	140.12
5.	ಹುಮ್ನಾಬಾದ್	812	118.87	149.18	268.05
	ಒಟ್ಟು	2341	366.27	383.07	749.34

(ಆ) ಸಹಕಾರ ಸಂಘಗಳ ನಿಬಂಧಕರಿಂದ ಪ್ರಸ್ತಾವನೆಯು ಸರ್ಕಾರಕ್ಕೆ ತಲುಪಿದ್ದು ಅನುದಾನ ಬಿಡುಗಡೆ ಸಂಬಂಧ ಸರ್ಕಾರಿ ಆದೇಶ ಹೊರಡಿಸಲಾಗಿದೆ.

(ಇ) ಈ ಫಲಾನುಭವಿಗಳಿಗೆ ಶೀಘ್ರವಾಗಿ ಪರಿಹಾರ ಬಿಡುಗಡೆ ಮಾಡಲಾಗುವುದು.